ಅಧ್ಯಕ್ಷರು : ಆಯಿತು. ಹೇಳಿದ್ದನೆ ಹೇಳುವುದಕ್ಕೆ ಮತ್ತೆ ಹೋಗಬೇಡಿ. ದಯವಿಟ್ಟು ಕುಳಿತುಕೊಳ್ಳಿ ಮಾನ್ಯ ಅಭಯಚಂದ್ರ ಜೈನ್‌ರವರನ್ನು ನಾನು ಕರೆದಿದ್ದೇನೆ.

(6-30 PM)

(2) ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ತೀವ್ರ ಅಭಾವದಿಂದ ಜನ ಸಾಮಾನ್ಯರು ತೊಂದರೆ ಅನುಭವಿಸುತ್ತಿರುವ ಬಗ್ಗೆ :

ಶ್ರೀ ಅಭಯಚಂದ್ರ ಜೈನ್ ಕೆ. (ಮೂಡಬಿದರೆ) : ಮಾನ್ಯ ಅಧ್ಯಕ್ಷರೆ, ಅಲ್ಲಿ ಕುಡಿಯುವ ನೀರಿಗೆ ಬಹಳ ದೊಡ್ಡ ತೊಂದರೆ ಇದೆ. Task Force ಗೆ ಹಣ ಬಿಡುಗಡೆಯಾಗಿಲ್ಲ, ಹಣ ಬಿಡುಗಡೆ ಮಾಡಿ. ಈಗ ಇರುವಂಥ ಬೋರ್‌ವೆಲ್‌ಗಳನ್ನು ಡ್ರಿಲ್ ಮಾಡುವಂಥ ಕೆಲಸ ಆಗಬೇಕು. ಯಾವ ಬೋರ್‌ವೆಲ್‌ಗಳಲ್ಲಿ ನೀರು ಖಾಲಿಯಾಗಿದೆ, ಅಲ್ಲಿ ಹೊಸ ಬೋರ್‌ವೆಲ್ ಗಳನ್ನು ಹಾಕಿಸುವಂಥ ಕೆಲಸ ಆಗಬೇಕಾಗಿದೆ. Task Forceಗೆ ಹಣ ಬಿಡುಗಡೆಯಾಗದಿರುವುದರಿಂದ ದಕ್ಷಿಣ ಕನ್ನಡ ಜಿಲ್ಲೆಯ ಜನರಿಗೆ ನೀರಿನ ಹಾಹಾಕಾರದಿಂದ ಬಹಳ ಜನರು ತೊಂದರೆ ಅನುಭವಿಸುತ್ತಿದ್ದಾರೆ. ಕೂಡಲೇ Task Force ಹಣ ಬಿಡುಗಡೆ ಮಾಡಬೇಕು.

ಶ್ರೀ ಯು.ಟಿ. ಖಾದರ್ : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೆ ಎಂದು ಗಮನವನ್ನು ಸೆಳೆದಿರುತ್ತೇವೆ. ಈ ಉತ್ತರದಿಂದ ಯಾವುದೇ ಪರಿಹಾರ ನಮಗೆ ಸಿಗುವುದಿಲ್ಲ. ಇದರ ಬಗ್ಗೆ ನಮಗೆ ಸ್ಪಷ್ಟವಾಗಿ ಹೇಳಬೇಕು. ಅಲ್ಲಿ ನೀರಿನ ಸಮಸ್ಯೆ ಉಂಟು ಅಥವಾ ಇಲ್ಲವೆ ಎಂದು. ಆ ನೀರಿನ ಸಮಸ್ಯೆಯನ್ನು ಬಗೆಹರಿಸಲು ಜಿಲ್ಲಾ ಪಂಚಾಯತಿ CEO ಮತ್ತು ಜಿಲ್ಲಾಧಿಕಾರಿಯವರ ಹತ್ತಿರ ಈ ವರ್ಷ ಎಷ್ಟು ಅನುದಾನವನ್ನು ನೀಡಿರುತ್ತೀರಿ. ಒಂದು ನಯಾಪೈಸೆ ಕೂಡ ಹಣ ಇಲ್ಲ. ಒಂದು ಬೋರ್ ವೆಲ್ ತೆಗೆಯಬೇಕಾದರೆ ಕನಿಷ್ಟ ಒಂದು ಕಡೆ ಒಂದರಿಂದ ಒಂದೂವರೇ ಲಕ್ಷ ರೂ.ಗಳ ಹಣ ಬೇಕಾಗುತ್ತದೆ.

ಅಧ್ಯಕ್ಷರು : ನೀವು ಹಣ ಇಲ್ಲವೆಂದು ಹೇಳಿರುತ್ತೀರಿ. ಒಂದು ಅಥವಾ ಎರಡು ಕ್ಲಾರಿಫಿಕೇಶನ್ ಕೇಳಬೇಕು.

ಶ್ರೀ ಯು.ಟಿ. ಖಾದರ್ : ಹಣ ಇರದಿದ್ದರೂ ಚಿಂತೆ ಇಲ್ಲ. ನೀವು ಒಂದು ಪತ್ರವನ್ನು CEO ರವರಿಗೆ ಕಳುಹಿಸಿ. ಬೋರ್‌ವೆಲ್‌ಗೆ ನಾವು ಹಣ ಕಳುಹಿಸುತ್ತೇವೆ ಎನ್ನುವ ಆದೇಶವನ್ನಾದರೂ ಕೊಡಿ. ಶಾಸಕರ Task Force ಎಂದು ಇದೆ, ಅದಕ್ಕೆ ನಮ್ಮನ್ನು ಅಧ್ಯಕ್ಷರನ್ನಾಗಿ ಮಾಡಿರುವುದರಿಂದ ಜನಸಾಮಾನ್ಯರು ನಮ್ಮ ಹತ್ತಿರ ಬಂದು ಕೇಳುತ್ತಿರುತ್ತಾರೆ. ಆ Task Force ಗೆ ಯಾವಾಗ ಹಣ ಕಳುಹಿಸುತ್ತೀರೆನ್ನುವುದರ ಬಗ್ಗೆ ನಮಗೆ ನಿರ್ದಿಷ್ಟವಾಗಿ ಹೇಳಿ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 3598– ಗ್ರಾಮೀಣ ಜನವಸತಿಗಳಿವೆ. ಜಿಲ್ಲೆಯಲ್ಲಿ 1,115–ಕೊಳವೆ ನೀರು ಸರಬರಾಜು ಯೋಜನೆಗಳು, 717– ಕಿರು ಸರಬರಾಜು ಯೋಜನೆಗಳು ಮತ್ತು 3937– ಕೈಪಂಪು ಕೊಳವೆ ಬಾವಿಗಳು ಹಾಗೂ ಸುಮಾರು 1250– ತೆರೆದ ಬಾವಿಗಳನ್ನು ಸಾರ್ವಜನಿಕ ಕುಡಿಯುವ ನೀರಿನ ವ್ಯವಸ್ಥೆಗಾಗಿ ಸ್ಥಾಪಿಸಲಾಗಿದೆ. ಇವುಗಳಲ್ಲಿ 2480– ಜನವಸತಿಗಳಲ್ಲಿ, 40 LPCD ಪ್ರಮಾಣದಲ್ಲಿ, ನೀರು ಸರಬರಾಜು ಮಾಡಲಾಗುತ್ತಿದೆ. ಉಳಿದ 1118– ಜನವಸತಿಗಳಲ್ಲಿ 20 ರಿಂದ 30 LPCD ಪ್ರಮಾಣದಲ್ಲಿ ನೀರು ಸರಬರಾಜಾಗುತ್ತಿದೆ.

2009–10ರ ಸಾಲಿಗೆ, ಮಂಗಳೂರು ಜಿಲ್ಲಾ ಪಂಚಾಯತಿಗೆ, ಒಟ್ಟು ರೂ.12.03 ಕೋಟಿಗಳನ್ನು ಕುಡಿಯುವ ನೀರಿನ ಬಾಬ್ತಿಗಾಗಿ ಬಿಡುಗಡೆ ಮಾಡಿದ್ದು, ಜನವರಿ–10ರ ಅಂತ್ಯಕ್ಕೆ ರೂ.7.26 ಕೋಟಿ ವೆಚ್ಚವಾಗಿದೆ. ಪ್ರಸಕ್ತ ಸಾಲಿನಲ್ಲಿ, ಕಾರ್ಯಪಡೆ ಯೋಜನೆಯಡಿಯಲ್ಲಿ, ಜಿಲ್ಲೆಗೆ ರೂ.100.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಇದರಡಿಯಲ್ಲಿ 78 ಕೊಳವೆ ಬಾವಿ/ತೆರೆದ ಬಾವಿಗಳನ್ನು ರೂ. 65.02 ಲಕ್ಷ ವೆಚ್ಚದಲ್ಲಿ ಹಾಗೂ ರೂ.34.80 ಲಕ್ಷ ವೆಚ್ಚದಲ್ಲಿ 21 ಪೈಪ್‌ಲೈನ್ ವಿಸ್ತರಣಾ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿದೆ. ಹಾಗೂ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳಿಂದ ರೂ.35.54 ಲಕ್ಷಗಳ ಪ್ರಸ್ತಾವನೆಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಇದರಲ್ಲಿ ರೂ.23.30 ಲಕ್ಷಗಳ ಅನುದಾನದಲ್ಲಿ 96 ಕೊಳವೆ ಬಾವಿ ಸ್ವಚ್ಛ/ಆಳಗೊಳಿಸ ಲಾಗಿದೆ. ಹಾಗೂ ಮಂಗಳೂರು ಹಾಗೂ ಬಂಟ್ವಾಳ ತಾಲ್ಲೂಕಿನ 26 ಜನವಸತಿಗಳಿಗೆ, ರೂ.12.24 ಲಕ್ಷ ಅನುದಾನದಲ್ಲಿ, ಬೇಸಿಗೆಯಲ್ಲಿ, ಟ್ಯಾಂಕರ್ ಮೂಲಕ ನೀರು ಒದಗಿಸಲಾಗಿದೆ. ಒಟ್ಟು 145 ಸಮಸ್ಯಾತ್ಮಕ ಜನವಸತಿಗಳನ್ನು

2009-10ನೇ ಸಾಲಿನಲ್ಲಿ ಆವರಿಸಲು ಉದ್ದೇಶಿಸಿದ್ದು, ಇಲ್ಲಿಯವರೆಗೆ 81 ಜನವಸತಿಗಳನ್ನು ಆವರಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ, 2-3 ಕಿ.ಮೀ. ದೂರದ ಪ್ರದೇಶದಿಂದ ನೀರು ತರಬೇಕಾಗಿರುವುದು ಹಾಗೂ ವಾರಕ್ಕೊಮ್ಮೆ ನೀರು ಒದಗಿಸಲು ಸಾಧ್ಯವಾಗಿಲ್ಲದಿರುವುದು ಕಂಡು ಬಂದಿರುವುದಿಲ್ಲ. ಬೇಸಿಗೆಯಲ್ಲಿ, ಜಿಲ್ಲೆಯ ಮಂಗಳೂರು ತಾಲ್ಲೂಕಿನ 15 ಗ್ರಾಮ ಪಂಚಾಯತಿಯ ಹಾಗೂ ಬಂಟ್ವಾಳ ತಾಲ್ಲೂಕಿನ 11 ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ಹಾಗೂ ಜಿಲ್ಲೆಯ ಕೆಲವೊಂದು ಕಡೆ ನೀರಿನ ಸಮಸ್ಯೆ ಉಂಟಾಗುವುದು. ಉಪ್ಪು ನೀರಿನ ಪ್ರದೇಶಗಳಿರುವ ಸ್ಥಳಗಳಲ್ಲಿ ಸಮಸ್ಯೆಗಳಾಗುತ್ತಿವೆ. ಹಾಗೂ ಬೇಸಿಗೆಯಲ್ಲಿ ಅಂತರ್ಜಲ ನೀರಿನ ಮಟ್ಟ ಕುಸಿದು ಕುಡಿಯುವ ನೀರಿನ ಸಮಸ್ಯೆಯುಂಟಾಗುತ್ತಿದೆ. ಇಂತಹ ಸ್ಥಳಗಳಲ್ಲಿ, ಕುಡಿಯುವ ನೀರಿನ ಜಲಮೂಲಗಳನ್ನು ಮರುಪೂರಣ ಮಾಡಿ ಅಂತರ್ಜಲವನ್ನು ಹೆಚ್ಚಿಸುವ ಬಗ್ಗೆ ಯೋಜನೆಯನ್ನು ಕೈಗೊಳ್ಳಲಾಗುತ್ತಿದೆ. ಈಗಾಗಲೇ ಪ್ರಾಯೋಗಿಕವಾಗಿ ಬೇಸಿಗೆಯಲ್ಲಿ ನೀರಿನ ಸಮಸ್ಯೆ ಉಂಟಾಗುವ, ಮಂಗಳೂರು ತಾಲ್ಲೂಕಿನ, ಮುನ್ನೂರು ಹಾಗೂ ಬಂಟ್ವಾಳ ತಾಲ್ಲೂಕಿನ ಕೋಲ್ನಾಡು ಗ್ರಾಮಗಳಲ್ಲಿನ ಜಲಮೂಲಗಳನ್ನು ಪ್ರಾಯೋಗಿಕವಾಗಿ ಜಲಮರುಪೂರಣಗೊಳಿಸಿ, ಕುಡಿಯುವ ನೀರಿನ ಯೋಜನೆಗಳ ಜಲಮೂಲ ಗಳನ್ನು ಪುನಃಶ್ಚೇತನಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ಇದಲ್ಲದೆ, ಮಂಗಳೂರು ತಾಲ್ಲೂಕಿನ, ಮಳವೂರು ಮತ್ತು ಇತರೆ 10 ಗ್ರಾಮಗಳಿಗೆ ಮತ್ತು ಕಿನ್ನಿಗೋಳಿ ಮತ್ತು ಇತರೆ 17 ಗ್ರಾಮಗಳಿಗೆ ಶಾಶ್ವತ ಕುಡಿಯುವ ನೀರಿನ ಯೋಜನೆಗಾಗಿ, ಕ್ರಮವಾಗಿ ರೂ.18.19 ಕೋಟಿ ಹಾಗೂ ರೂ. 16.80 ಕೋಟಿಗಳಲ್ಲಿ, ನದಿ ನೀರಿನ ಮೂಲಗಳಿಂದ, ವೆಂಟೆಡ್ ಡ್ಯಾಂಗಳನ್ನು ನಿರ್ಮಿಸಿ, ನೀರು ಸರಬರಾಜು ಮಾಡಲು ಮತ್ತು ಸಮುದ್ರದ ಉಪ್ಪು ನೀರನ್ನು ತಡೆಯಲು, ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಇದಲ್ಲದೆ, ಅಧಿಕ ಕಬ್ಬಿಣಾಂಶವಿರುವ 296 ಜನವಸತಿಗಳಲ್ಲಿ 716 ಟೆರ್ರಾಫಿಲ್ ಫಿಲ್ಟರ್‌ಗಳನ್ನು ರೂ.394.00 ಲಕ್ಷ ವೆಚ್ಚದಲ್ಲಿ ಅಳವಡಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ.

ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ದಕ್ಷಿಣ ಕನ್ನಡ ಜಿಲ್ಲೆಯ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ನಮ್ಮ ಗಮನಕ್ಕೆ ತಂದಿದ್ದಾರೆ. ನಾವು ಡಿಟೇಲ್ ಆದ ಉತ್ತರವನ್ನು ಕೊಟ್ಟಿರುತ್ತೇನೆ. ಖಾಯಂ ಆಗಿ ಕುಡಿಯುವ

ನೀರಿನ ಯೋಜನೆಗಳನ್ನು ಮಂಜೂರು ಮಾಡಿದ್ದು ಮತ್ತು ಪ್ರಗತಿಯಲ್ಲಿ ಇರುವಂಥವುಗಳನ್ನು ನಾನು ಹೇಳಿದ್ದೇನೆ. ಮಾನ್ಯ ಶಾಸಕರು ಇಲ್ಲಿ ವ್ಯಕ್ತಪಡಿಸುತ್ತಿರುವಂಥದ್ದು ತಾತ್ಕಾಲಿಕವಾಗಿ ಈ ಬೇಸಿಗೆಯ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗುತ್ತದೆ. ಇದಕ್ಕೆ ತಾತ್ಕಾಲಿಕವಾಗಿ ಪರಿಹಾರವನ್ನು ಹುಡುಕಲಿಕ್ಕೆ ಬೋರ್‌ವೆಲ್‌ಗಳನ್ನು ಕೊರೆಯಲಿಕ್ಕೆ ಆದಷ್ಟು ಬೇಗನೆ ಹಣವನ್ನು ಬಿಡುಗಡೆ ಮಾಡಬೇಕೆನ್ನುವುದರ ಬಗ್ಗೆ ತಮ್ಮ ಭಾವನೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಖಾಯಂ ಆದ ಯೋಜನೆಗಳನ್ನು execute ಮಾಡುವಂಥದ್ದು Process start ಆಗಿದೆ. ಇದರ ಜೊತೆಗೆ ತಕ್ಷಣಕ್ಕೆ ಏನು ಹಣ ಬಿಡುಗಡೆ ಮಾಡಬೇಕು. ಶಾಸಕರ ಅಧ್ಯಕ್ಷತೆಯಲ್ಲಿ ಇರುವಂಥ ಆ Task Force Committee ಏನಿದೆ ಅದಕ್ಕೆ ಸ್ವಲ್ಪ ಹಣವನ್ನು ಬಿಡುಗಡೆ ಮಾಡಬೇಕು ಎನ್ನುವಂಥದ್ದು ಅದಕ್ಕೆ ಸರ್ಕಾರ ಸಿದ್ಧವಿದೆ. ಆದಷ್ಟು ಬೇಗನೆ ಇದೇ ವಾರದಲ್ಲಿ ಹಣ ಬಿಡುಗಡೆ ಮಾಡುವುದಕ್ಕೆ ನಾವು ವ್ಯವಸ್ಥೆ ಮಾಡುತ್ತೇವೆ. ಎಲ್ಲೆಲ್ಲಿ ತೊಂದರೆ ಇದೆ ಅಲ್ಲಿಗೆ ಹಣ ಬಿಡುಗಡೆ ಮಾಡುತ್ತೇವೆ.

(ಗೊಂದಲ)

ಡಾ: ಎಂ.ಸಿ.ಸುಧಾಕರ್ : ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿನ ತೊಂದರೆ ಬಹಳ ಇದೆ. ಇದಕ್ಕೆ ನಾವು ಸುಮಾರು 8 ತಿಂಗಳುಗಳಿಂದ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ : ಆಯಿತು ಮಾಡುತ್ತೇವೆ.

ಅಧ್ಯಕ್ಷರು : ಆಯಿತು.

(3) ಹಾಸನ ಜಿಲ್ಲೆ ಅರಕಲಗೂಡು ಕ್ಷೇತ್ರದ ರಸ್ತೆಗಳು ತೀರಾ ಹದಗೆಟ್ಟಿರುವುದರಿಂದ ಸಂಚಾರ ವ್ಯವಸ್ಥೆಯು ಅಸ್ತವ್ಯಸ್ತವಾಗಿರುತ್ತದೆ. ಲೆಕ್ಕ ಶೀರ್ಷಿಕೆ 5054ರ ಅಡಿಯಲ್ಲಿ ಪ್ರಸಕ್ತ ವರ್ಷ ಯಾವುದೇ ಅನುದಾನವನ್ನು ಬಿಡುಗಡೆ ಮಾಡದಿರುವುದರಿಂದ ಕ್ಷೇತ್ರದ ಕಾಮಗಾರಿಗಳ ಪ್ರಗತಿಯು ಕುಂಠಿತ ಗೊಂಡಿರುವುದರ ಬಗ್ಗೆ :

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) ಅರಕಲಗೂಡು ವಿಧಾನಸಭಾ ಕ್ಷೇತ್ರಕ್ಕೆ ಅರಕಲಗೂಡು ತಾಲ್ಲೂಕು ಹಾಗೂ ಹೊಳೇನರಸೀಪುರ ತಾಲ್ಲೂಕಿನ ಹಳ್ಳಿಮೈಸೂರು ಹೋಬಳಿಯು ಒಳಪಟ್ಟಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 5054(ಯೋಜನೆ) ಇತರೆ ರಸ್ತೆ